**ಸಾಕ್ಷಿಯನ್ನು ದಿನಾಂಕ: 04.08.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು:** ಆರೋಪಿ ಪರ ವಕೀಲರಾದ ಶ್ರೀ ಆರ್ ವಿ ಸಿ ರವರಿಂದಃ-

ನನಗೆ 2018 ರಿಂದ ಆರೋಪಿ ಗೊತ್ತು. ಆರೋಪಿಯು ಮತ್ತು ನಾನು ಒಂದೇ ಕಟ್ಟಡದಲ್ಲಿ ಆರೋಪಿಯು ಕೆಳಗಿನ ಅಂತಸ್ತಿನಲ್ಲಿ ನಾನು ಮೇಲೆನ ಅಂತಸ್ತಿನಲ್ಲಿ ಬಾಡಿಗೆಗೆ ಇದ್ದೇವು. ಗ್ರಾನೈಟ್ ಬುಸಿನೆಸ್ ಗೆ ನಾನು ಬಂಡವಾಳ ಹಾಕಿರುವುದು ಪ್ರೋಪ್ರೇಟರ್ ಆಗಿ. ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುತ್ತಿರಲಿಲ್ಲ. ಆರೋಪಿಯು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ. ಇಂದಿರಾನಗರದಲ್ಲಿರುವ ಸಿವಿಲ್ ಕೋರ್ಟ್ ನಲ್ಲಿ ಆರೋಪಿಯು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ ನನ್ನನ್ನು ಒಂದು ಬಾರಿ ಕರದುಕೊಂಡು ಹೋಗಿ ಒಳಗೆ ಬರಬೇಡಿ ಹೊರಗಡೆ ಇರಿ ಎಂದು ಹೇಳಿ ಹೋಗಿರುತ್ತಾರೆ. ಈಗ ನಾನು ಸ್ವಂತ ಮನೆಗೆ ಹೋಗಿರುತ್ತೇನೆ.

2. ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತೇನೆ. ನಮ್ಮ ಆಡಿಟರ್ ರವರು ನನಗೆ ಯಾವುದೇ ಹಣಕಾಸಿನ ವ್ಯವಹಾರ ನಗದು ರೂಪದಲ್ಲಿ ಮಾಡಬಾರದು ಎಂದು ಹೇಳಿಲ್ಲ. ನಾನು ಬುಸಿನೆಸ್ ಮಾಡುವಂತಹ ಜಾಗದಲ್ಲಿ ನಗದು ರೂಪದಲ್ಲಿಯೇ ವ್ಯವಹಾರ ಮಾಡುತ್ತೇನೆ. ಐಟಿಆರ್ ಫೈಲ್ ಮಾಡುವ ಮೊದಲು ನಮ್ಮ ಆಡಿಟರ್ ಯಾರು ಯಾರು ಎಷ್ಟೇಷ್ಟು ಹಣ ನನಗೆ ಕೊಡಬೇಕು ಎಂದು ಮಾಹಿತಿ ಪಡೆದಿಲ್ಲ. ಐಟಿಆರ್ ನಲ್ಲಿ ಯಾರಿಂದ ಎಷ್ಟು ಹಣ ಬರಬೇಕು ಎಂದು ತಿಳಿಸಬೇಕು ಎಂದರೆ ನನಗೆ ವಿದ್ಯಾಭಾಸವಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಐಟಿಆರ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿಗೆ ನಾನು ಯಾವುದೇ ಹಣ ನೀಡದೇ ಇದ್ದ ಕಾರಣ ಸದರಿ ವಿಚಾರವನ್ನು ಮರೆಮಾಚುವ ಉದ್ದೇಶದಿಂದ ಐಟಿಆರ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ಆರೋಪಿಯು ಯಾವ ಕಾರಣಕ್ಕೆ ಹಣವನ್ನು ಪಡೆದಿರುತ್ತಾರೆ ಎಂಬ ಪ್ರಶ್ನೆಗೆ ಆರೋಪಿಯು ತಾನು ವಕೀಲೆ ಪ್ರಕರಣಗಳ ಹೂಡಿಕೆ ಮಾಡಬೇಕು ಅದು ಗೌಪ್ಯ, ಯಾರಿಗೂ ತಿಳಿಸಬಾರದು ಎಂದು ಹೇಳಿ ನನ್ನಿಂದ ಹಣ ಪಡೆದಿರುತ್ತಾರೆ. ಸದರಿ ವಿಚಾರವನ್ನು ಪಿರ್ಯಾದಿನಲ್ಲಿ ಹೇಳಿಲ್ಲ ಎಂದರೆ ಹೌದು. ಆರೋಪಿಯು ಮನೆಗೆಲಸ ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ಆರೋಪಿ ವಕೀಲೆ ಎಂದು ಹೇಳಿಕೊಂಡಿರುವ ಬಗ್ಗೆ ಸಾಕ್ಷ್ಯವನ್ನು ಕೊಡಿಸಬಲ್ಲೆ. ಆರೋಪಿಗೆ ಹಣವನ್ನು ನೀಡುವಾಗ ನನ್ನ ಪತ್ನಿ ಮತ್ತು ಪಕ್ಕದ ಮನೆಯವರು ಇದ್ದರು. ನನ್ನ ಪತ್ನಿಯ ಅನುಸೂಯದೇವಿ. ನನ್ನ ಪತ್ನಿ ಗೃಹಿಣಿ.

4. ಆರೋಪಿಗೆ ಅಷ್ಟೊಂದು ಹಣ ನೀಡಿಲ್ಲ, ಅಷ್ಟು ಹಣ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ನನ್ನ ಬ್ಯಾಂಕಿನಲ್ಲಿಯೂ ಸಹ ಅಷ್ಟು ಹಣ ಹೊಂದಿಲ್ಲ ಆ ಕಾರಣದಿಂದಲೇ ಬ್ಯಾಂಕ್ ಖಾತೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ನಾನು ವಿದ್ಯಾಭ್ಯಾಸ ಮಾಡಿಲ್ಲ ನಾನು ಬ್ಯಾಂಕ್ ವ್ಯವಹಾರ ಮಾಡಿಲ್ಲ ಎಂದು ನುಡಿದಿರುತ್ತಾರೆ. ನಾನು ಯಾವುದೇ ವ್ಯವಹಾರ ಮಾಡುವುದಿಲ್ಲ ಮತ್ತು ನನಗೆ ಯಾವುದೇ ಆದಾಯವಿಲ್ಲ ಎಂದರೆ ಸರಿಯಲ್ಲ. ಐಟಿಆರ್ ಮತ್ತು ನನ್ನ ಬ್ಯಾಂಕ್ ಖಾತೆಯ ದಾಖಲೆಗಳನ್ನು ಮುಂದಿನ ಸುನಾವಣೆಯ ದಿನದಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

2ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.